# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162 (ಹೊಸ ಸಂಖ್ಯೆ: 214) ಗಿರಿನಗರ, ಬೆಂಗಳೂರು.

### ಫೆಬ್ರವರಿ 2023 : ವಾರ್ಡ್ ಸಮಿತಿಯ 2ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/ 2020-21, ದಿನಾಂಕ: 22-09-2021.

******

ದಿನಾಂಕ : 17-02-2023

ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ

ಸಮಯ : ಪೂರ್ವಾಹ್ನ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಮೇಶ್ .ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-214, ಗಿರಿನಗರ |
| 3 | ಶ್ರೀ ಆರ್. ರಾಜಶೇಖರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ಶ್ರೀ ವಿ.ಟಿ. ವಿಜಯಕುಮಾರ್ | ಪಿ.ಎಸ್.ಐ ಗಿರಿನಗರ ಪೋಲೀಸ್ ಠಾಣೆ ಸಿಬ್ಬಂದಿ |
| 5 | ಶ್ರೀ ಆರ್. ಸತೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು (ಗಿರಿನಗರ ವಾರ್ಡ್) |
| 6 | ಶ್ರೀ ವಸಂತ್ ಕುಮಾರ್ | ಬಿಬಿಎಂಪಿ |
| 7 | ಶ್ರೀ ಲಕ್ಷ್ಮೀನಾರಾಯಣ | ಕಂದಾಯ ಮೌಲ್ಯ ಮಾಪಕರು |
| 8 | ಶ್ರೀ ಸಚಿನ್ .ಕೆ.ಪಿ | ಮಾರ್ಷಲ್ |
| 9 | ಶ್ರೀ ಅಪ್ಪಾಜಿ | ಸೂಪರ್‌ವೈಸರ್, ಘ.ತ್ಯಾ.ನಿ |
| 10 | ಹೆಚ್.ಆರ್. ಆನಂದ ಕೃಷ್ಣ | ಸಾರ್ವಜನಿಕರು |
| 11 | ಶ್ರೀ ಎಸ್.ಎಂ.ಆರ್ ಪ್ರಸಾದ್ | ಸಾರ್ವಜನಿಕರು |
| 12 | ಶ್ರೀ ಎಲ್. ಜೀವನ್ | ಸಾರ್ವಜನಿಕರು |
| 13 | ಶ್ರೀ ಎನ್.ವೆಂಕಟೇಶ್ ಮೂರ್ತಿ | ಸಾರ್ವಜನಿಕರು. |
| 14 | ಶ್ರೀ ಸ್ವಾಮಿದಾಸ್ | ಸಾರ್ವಜನಿಕರು. |
| 15 | ಶ್ರೀ ಪ್ರಸನ್ನ ಕುಮಾರ್ | ಸಾರ್ವಜನಿಕರು |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

1. ಗಿರಿನಗರ ವಾರ್ಡ್ ವ್ಯಾಪ್ತಿಯಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಗೂಡ್ಸ್ ವಾಹನಗಳನ್ನು ಸಂಚಾರ ದಟ್ಟಣೆ ಹೆಚ್ಚಿರುವ ಸಮಯದಲ್ಲಿ (Peak Hours) ಮುಖ್ಯ ರಸ್ತೆಗಳಲ್ಲಿ ನಿಲುಗಡೆ ಮಾಡಲು ಅವಕಾಶವಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಸಂಚಾರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಸಭೆಗೆ ತಿಳಿಸಿದರು.

2. ಗಿರಿನಗರ ವಾರ್ಡ್ ವ್ಯಾಪ್ತಿಯ ಪುಷ್ಪಾಂಜಲಿ ಉದ್ಯಾನವನದ ಹತ್ತಿರ ಇರುವ ರಸ್ತೆಯ ಉಬ್ಬನ್ನು (Road Humps) ತೆರವುಗೊಳಿಸಲು ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

3. ಗಿರಿನಗರ ವಾರ್ಡ್ 214ರ ವ್ಯಾಪ್ತಿಯಲ್ಲಿ 1ನೇ ಅಡ್ಡರಸ್ತೆ, ಶ್ರೀವಿದ್ಯಾನಗರ ಇಲ್ಲಿ ಬೆಸ್ಕಾಂ ಕೇಬಲ್‌ಗಳನ್ನು ರಸ್ತೆಯ ಬದಿಯಲ್ಲಿ ಬಿಟ್ಟಿದ್ದು, ಸದರಿ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಲು ಬೆಸ್ಕಾಂನ ಅಧಿಕಾರಿಗಳಿಗೆ ತಿಳಿಸುವಂತೆ ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

4. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 6ನೇ ಬ್ಲಾಕ್, 4ನೇ ಮುಖ್ಯರಸ್ತೆ ಹಾಗೂ 1ನೇ ಅಡ್ಡರಸ್ತೆಗೆ ಹೊಂದಿಕೊಂಡಂತಿರುವ ಸಿ.ಎ ನಿವೇಶನದ ಬಳಿ ಸಾರ್ವಜನಿಕರು ಕಸವನ್ನು ಎಸೆಯದಂತೆ ನಿಗಾವಹಿಸಲು ಮಾರ್ಷಲ್ ರವರಿಗೆ ಹಾಗೂ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು. .

5. ವಾರ್ಡ್ 214ರ ವ್ಯಾಪ್ತಿಯ ಗಿರಿನಗರ 14ನೇ ಅಡ್ಡರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿ ಒತ್ತುವರಿ ಮಾಡಿ ತಳ್ಳುವ ಗಾಡಿಗಳನ್ನು ನಿಲ್ಲಿಸಿದ್ದು, ಪರಿಶೀಲಿಸಿ ತೆರವುಗೊಳಿಸುವ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸೂಚಿಸಿದರು.

6. ವಾರ್ಡ್ 214ರ ಕಂದಾಯ ಮೌಲ್ಯ ಮಾಪಕರಾದ ಶ್ರೀ ಲಕ್ಷ್ಮಿನಾರಾಯಣ್ ರವರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸಲು, ಹೆಸರು ವರ್ಗಾವಣೆಗೊಳಿಸಲು, 10-03-2023ರ ವರೆಗೆ ಎನ್.ವಿ.ಎಸ್.ಪಿ (National Voters Service portal) ವೆಬ್‌ಸೈಟ್‌ನಲ್ಲಿ ಅವಕಾಶವಿರುವ ಬಗ್ಗೆ ಸಭೆಗೆ ತಿಳಿಸಿದರು.

7. ಗಿರಿನಗರ ವಾರ್ಡ್ 214ರ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 2ನೇ ಫೇಸ್, 7ನೇ ಬ್ಲಾಕ್, 4ನೇ ಬ್ಲಾಕ್ ಮತ್ತು 6ನೇ ಬ್ಲಾಕ್‌ನಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು.

"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು".

17/02/2023

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.